**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 17.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀಮತಿ. ಎ ಎಸ್ ಕೆ ವಕೀಲರಿಂದಃ**

2. ಈ ಅರ್ಜಿ ಸಲ್ಲಿಸಿದ ನಂತರದಲ್ಲಿ ಎದುರುದಾರ ನಂ.3 ಇವರನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಿರುತ್ತೇವೆಂದರೆ ಸರಿ. ಈ ಪ್ರಕರಣದಲ್ಲಿ ಅರ್ಜಿದಾರರು ಎದುರುದಾರ ನಂ.3 ಕಂಪನಿಯನ್ನು ಸೇರ್ಪಡೆ ಮಾಡಿರುತ್ತಾರೆಂದರೆ ಸರಿ. ಎದುರುದಾರ ನಂ.3 ಇವರು ಅರ್ಜಿದಾರರಿಗೆ ವಿಮಾ ಪಾಲಿಸಿ ನೀಡಿರುತ್ತಾರೆಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರ ಹಾಗೂ ಎದುರುದಾರ ನಂ.1 ಇವರ ವಾಹನದ ಚಾಲಕನ ಮೇಲೆ ದೋಷಾರೋಪಣೆಪಟ್ಟಿ ಸಲ್ಲಿಸಲಾಗಿದೆ ಎಂದರೆ ಸರಿ. ಎದುರುದಾರ ನಂ.1 ತಮ್ಮ ವಾಹನವನ್ನು ನಮ್ಮ ಕಂಪನಿಯ ಹತ್ತಿರ ವಿಮೆ ಮಾಡಿಸಿರುವ ಕಾರಣ ನಾವೇ ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸಾಕ್ಷಿ ಇಲ್ಲ ತಲಾ 50% ಕೊಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಎದುರುದಾರ ನಂ.3 ಫಾರ್ಮಲ್ ಪಾರ್ಟಿಯಾಗಿದ್ದು ಅವರು ಅರ್ಜಿದಾರರಿಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಕಂಪನಿಯವರು ಪಾಲಿಸಿ ನೀಡಿದ್ದಲ್ಲಿ ಹಾಗೂ ಅಪಘಾತದಲ್ಲಿ ಅವರ ತಪ್ಪು ಇದ್ದಾಗ ಅವರ ವಿಮಾ ಕಂಪನಿಯವರು ಅವರಿಗೆ ಪರಿಹಾರ ಕೊಡಲು ಬಾದಸ್ಥರಲ್ಲ ಎಂದರೆ ನಿಜ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**